# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 1466
**ಮಾನ್ಯ ಸದಸ್ಯರ ಹೆಸರು** : ಎನ್. ರವಿಕುಮಾರ,
(ವಿಧಾನ ಸಭೆಯಿಂದ ಚುನಾಯಿತರಾದರು)
**ಉತ್ತರಿಸುವ ದಿನಾಂಕ** : 20.03.2025
**ಉತ್ತರಿಸುವ ಸಚಿವರು.** : ಗೃಹ ಸಚಿವರು.

| ಕ್ರ.ಸಂ | ಪ್ರಶ್ನೆ | ಉತ್ತರ |
| --- | --- | --- |
| ಅ) | ರಾಜ್ಯದಲ್ಲಿರುವ ಮದರಸಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಅನೈತಿಕ ಘಟನೆಗಳು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಥಣಿಸಂದ್ರದ ಮದರಸದಲ್ಲಿ ಅಪ್ರಾಪ್ತ ಹೆಣ್ಣು ಮಗುವಿನ ಮೇಲೆ ದೌರ್ಜನ್ಯ ನಡೆಸಿದ ಆರೋಪಿಯ ಮೇಲೆ ಪೋಕ್ಸೋ ಪ್ರಕರಣ ದಾಖಲು ಮಾಡಲಾಗಿದೆಯೇ; (ವಿವರ ನೀಡುವುದು); | ರಾಜ್ಯದಲ್ಲಿರುವ ಮದರಸಗಳ ಪೈಕಿ ಬೆಂಗಳೂರು ನಗರ ಮತ್ತು ಬೀದರ್ ಜಿಲ್ಲೆ ಹೊರತುಪಡಿಸಿ, ಉಳಿದ ಜಿಲ್ಲೆಗಳಲ್ಲಿ ಅನೈತಿಕ ಘಟನೆಗಳು ನಡೆದಿರುವ ಬಗ್ಗೆ ಪ್ರಕರಣಗಳು ದಾಖಲಾಗಿರುವುದು ಕಂಡು ಬಂದಿರುವುದಿಲ್ಲ. ದಾಖಲಾದ ಪ್ರಕರಣಗಳ ವಿವರ ಕೆಳಗಿನಂತಿದೆ.<br>1 ಬೆಂಗಳೂರು ನಗರ 8 ಪ್ರಕರಣಗಳು<br>2 ಬೀದರ್ ಜಿಲ್ಲೆಯಲ್ಲಿ 1ಪ್ರಕರಣ<br>ಥಣಿಸಂದ್ರದ ಮದರಸದಲ್ಲಿ ಅಪ್ರಾಪ್ತ ಹೆಣ್ಣು ಮಗುವಿನ ಮೇಲೆ ದೌರ್ಜನ್ಯ ನಡೆದ ಪ್ರಕರಣ ದಾಖಲಾಗಿರುವುದಿಲ್ಲ. |
| ಆ) | ಕಳೆದ 2 ವರ್ಷಗಳಲ್ಲಿ ಮದರಸಗಳಲ್ಲಿ ಅಕ್ರಮ ವಾಸ ಮಾಡುತ್ತಿದ್ದ ಎಷ್ಟು ವಿದೇಶಿಯರನ್ನು ಬಂಧಿಸಲಾಗಿದೆ; (ವಿವರ ನೀಡುವುದು) | ಕಳೆದ 2 ವರ್ಷಗಳಲ್ಲಿ ಮದರಸಗಳಲ್ಲಿ ಅಕ್ರಮ ವಾಸ ಮಾಡುತ್ತಿದ್ದ ವಿದೇಶಿಯರನ್ನು ಬಂಧಿಸಲಾದ ಬಗ್ಗೆ ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲ. |
| ಇ) | ಮದರಸಗಳಲ್ಲಿ ಅಕ್ರಮ ಶಸ್ತ್ರಾಸ್ತ್ರ ಸೇರಿದಂತೆ ಕಲ್ಲು, ಪೆಟ್ರೋಲ್ ಬಾಂಬು, ಮಾದಕ ದ್ರವ್ಯಗಳನ್ನು ಸಂಗ್ರಹಿಸಿ ಇಡುವ ಪ್ರದೇಶವಾಗಿರುವ ಕುರಿತು ಸರ್ಕಾರದ ನಿಲುವೇನು; ಕಾಲಕಾಲಕ್ಕೆ ಮದರಸಗಳ ಪರಿಶೀಲನೆಯ ಕುರಿತು ಸರ್ಕಾರ ಕ್ರಮ ಕೈಗೊಳ್ಳುವುದೇ? (ವಿವರ ನೀಡುವುದು) | ಇಂತಹ ಚಟುವಟಿಕೆಗಳ ಕುರಿತು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br>• ಇಂತಹ ಚಟುವಟಿಕೆಗಳು ಕಂಡುಬಂದಲ್ಲಿ ಕಾನೂನು ರೀತ್ಯಾ ಕ್ರಮಕೈಗೊಳ್ಳಲಾಗುತ್ತದೆ.<br>• ಇಂತಹ ಕಾನೂನು ಬಾಹಿರ ಚಟುವಟಿಕೆಗಳ ಬಗ್ಗೆ ನಿಗಾವಹಿಸುವ ನಿಟ್ಟಿನಲ್ಲಿ ಗುಪ್ತಮಾಹಿತಿಯನ್ನು ಸಂಗ್ರಹಿಸಿ ಇಂತಹ ಕೃತ್ಯಗಳು ಕಂಡುಬಂದಲ್ಲಿ ಭಾಗಿಯಾದವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕಾನೂನು ಕ್ರಮ ಕೈಗೊಳ್ಳಲಾಗುವುದು. |

| | | |
|---|---|---|
| | | • ಕಾಲಕಾಲಕ್ಕೆ ಬೀಟ್ ಸಿಬ್ಬಂದಿಯವರನ್ನು ನೇಮಕ ಮಾಡಿ ಎಲ್ಲಾ ಧಾರ್ಮಿಕಸ್ಥಳಗಳಲ್ಲಿ ಬೀಟ್ ಮೀಟಿಂಗ್ ಕೈಗೊಳ್ಳಲು ಸೂಚಿಸಲಾಗಿರುತ್ತದೆ.<br>• ವಿಶೇಷ ದಿವಸಗಳಂದು ಶಾಂತಿ ಸಭೆಯನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಸಮಾಜ ಮುಖಂಡರಿಗೆ ಶಾಂತಿ ಕಾಪಾಡಲು ಸೂಕ್ತ ಸಲಹೆ ಸೂಚನೆ ನೀಡಲಾಗುತ್ತಿದೆ. |

ಸಂಖ್ಯೆ: ಹೆಚ್‌ಡಿ 16 ಎಸ್‌ಡಿಎನ್ 2025

**(ಡಾ: ಜಿ.ಪರಮೇಶ್ವರ)**
ಗೃಹ ಸಚಿವರು